ಜ್ಞಾನಾಂಜನದೆಡೆಗೆ, ಇಂದ್ರಿಯಾನುಭವದ ವೈವಿಧ್ಯತೆಯಿಂದ ಆತ್ಮಾನುಭವದ ಅದ್ವೈತದೆಡೆಗೆ.

ಏಕಾಣುಜೀವಿಯಾದ ಅಮೀಬಾದಿಂದ ಮಾನವನವರೆಗೂ ಯಾವುದೊಂದು ಜೀವಿಗೂ ಆತ್ಮಪ್ರಜ್ಞೆ ಇರುವಂತೆ ಕಾಣದು; ಆದರೆ ಮಾನವನಿಗೆ ಮಾತ್ರ ಅದು ಇರುವುದು ಸುಳ್ಳಲ್ಲ. ಸ್ವತಂತ್ರ ವಾಗಿ ಜೀವಕ್ರಿಯೆ ನಡೆಸಬಲ್ಲ ಜೀವಕೋಶಗಳಿಗೆ ಆತ್ಮಪ್ರಜ್ಞೆ ಇಲ್ಲ; ಆದರೆ ಅಂತಹ ಕೋಶಗಳ ಸಮುದಾಯವಾದ ನಮಗೆ ಇದೆ. ಮಾನವರದ್ದೇ ಸಂಘಟನೆಯಾದ ಸಮಾಜಕ್ಕೆ, ದೇಶಕ್ಕೆ – ಏಕೆ, ಇಡಿಯ ಮಾನವಜನಾಂಗಕ್ಕೆ – 'ನಾವೆಲ್ಲ ಒಂದು' ಎಂಬ ಆತ್ಮಪ್ರಜ್ಞೆಯ ಐಕ್ಯವಿದೆಯೆ? ಇದ್ದರೂ ಅಪರೂಪಕ್ಕೊಮ್ಮೆ ತಲೆದೋರಿ ಮರೆಯಾಗುತ್ತದೆ. ಮಾನವಶರೀರಿಗೆ ಮಾತ್ರವೇ ಈ ಆತ್ಮಪ್ರಜ್ಞೆ ಏಕಿರಬೇಕು?

ಅನುಭೂತಿಯ ಎದುರು ಇಂತಹ ಪ್ರಶ್ನೆಗಳೆಲ್ಲ ಅರ್ಥಹೀನವಾಗಿಬಿಡುತ್ತವೆ. ಆತ್ಮಾನುಭೂತಿಯನ್ನು ಸಮಷ್ಟಿ ಮಟ್ಟಕ್ಕೊಯ್ದು ಬ್ರಹ್ಮಾನುಭೂತಿಯನ್ನಾಗಿಸಿಕೊಳ್ಳುವ ಅತ್ಯಂತ ಸುಲಭ ವಿಧಾನ ಎಂದರೆ 'ತನ್ನಂತೆಯೇ ಪರರು' ಎಂದು ಪರಿಭಾವಿಸುವುದು. ನನ್ನಂತೆಯೇ ಕೋಟ್ಯಂತರ 'ಶರೀರಿ'ಗಳಿದ್ದಾರೆ; ನನ್ನ ಪರಿಸರವೇ ಅವರದ್ದೂ ಆಗಿದೆ; ನನ್ನ ಅನುಭವಕ್ಕೆ ಬರುವಂತಹ ಘಟನೆಗಳನ್ನೇ ಅವರೂ ಅನುಭವಿಸುತ್ತಾರೆ ಎಂದಮೇಲೆ ನನ್ನಿಂದ ಅವರು ಭಿನ್ನರು ಹೇಗಾದಾರು? ಹೀಗೆ ಪರಿಭಾವಿಸಿದಾಗ ನಾನೇ ಇನ್ನಿತರ ರೂಪಗಳಲ್ಲಿ ಅವರಾಗಿರುವೆನೆಂದೆನಿಸುತ್ತದೆ. ಈ ನಾನು–ಅವರು, ಶರೀರ–ಶರೀರಿ, ವಸ್ತು–ಚೈತನ್ಯ ಎನ್ನುವುದೆಲ್ಲ ಭಾಷೆಯ ಗೋಡೆಗಳು; ನೈಜಗೋಡೆಗಳಲ್ಲ. ಒಂದೊಂದು ಜೀವ ಕೋಶದಲ್ಲಿರುವ ಚೈತನ್ಯವೂ ನಿಜವಾಗಿ ಬ್ರಹ್ಮವೇ, ಒಂದೊಂದು ಪರಮಾಣುವಿನಲ್ಲಿ ಅಡಗಿರುವ ಚೈತನ್ಯವೂ ಬ್ರಹ್ಮವೇ, 'ಬಿಗ್ ಬ್ಯಾಂಗ್' ಆಗಿರುವುದೆನ್ನಲಾದ ಬ್ರಹ್ಮಾಂಡಗಳ ಮೂಲದಲ್ಲಿದ್ದ ಮಹಾಚೈತನ್ಯವೂ ಬ್ರಹ್ಮವೇ.

## 'ತರ್ಕ'ಕ್ಕೆ ತಿಲಾಂಜಲಿಯಿತ್ತ ವಿಜ್ಞಾನ

ಈಗ ಸ್ವಲ್ಪ ವಿಜ್ಞಾನದತ್ತ ಇಣುಕಿ ನೋಡೋಣ. ಕಳೆದ ಶತಮಾನದ ಪ್ರಾರಂಭದವರೆಗೂ ವಿಜ್ಞಾನದಲ್ಲಿ ತರ್ಕಬದ್ಧವಾಗಿಲ್ಲದೆ ಇದ್ದ ಯಾವೊಂದು ಊಹೆಗೂ ಮನ್ನಣೆ ಇರಲಿಲ್ಲ. ಚಕ್ರಬಂಧ ಸ್ಪರ್ಧೆಯಲ್ಲಿ ಚೂರುಗಳನ್ನೆಲ್ಲ ಒಂದುಗೂಡಿಸಿ ಅವನ್ನು ಅರ್ಥವತ್ತಾದ ಒಂದು ಆಕಾರಕ್ಕೆ ತರುವಂತೆ, ಲಭ್ಯವಿರುವ ಪ್ರಾಯೋಗಿಕ ಸಂಗತಿ ಗಳನ್ನೆಲ್ಲ ಹೊಂದಿಸಿ ಒಂದು ತಾರ್ಕಿಕ ಸಿದ್ಧಾಂತವನ್ನು ರೂಪಿಸಲು ವಿಜ್ಞಾನ ಹೆಣಗುತ್ತಿತ್ತು. ಎಲ್ಲಿಂದ ಆರಂಭಿಸಿ ಎಲ್ಲಿಗೆ ಹೋಗಿ ಮುಟ್ಟಿದರೂ ಸರಿಯೆ, ಹಂತಗಳೆಲ್ಲ ತರ್ಕಬದ್ಧವಾಗಿದ್ದರಾಯಿತು – ಸಿದ್ಧಾಂತ ರೂಪುಗೊಂಡಂತೆಯೇ.

ವಿಶ್ವದಲ್ಲಿರುವ 'ವಸ್ತು'ವೆಲ್ಲವೂ ಪ್ರೋಟಾನ್ ನ್ಯೂಟ್ರಾನ್ ಎಲೆಕ್ಟ್ರಾನ್‌ಗಳಿಂದಲೇ ಆಗಿವೆ ಎಂದು ನಂಬುವಂತಾದಾಗ, ಚಕ್ರಬಂಧ ಸ್ಪರ್ಧೆಯನ್ನು ಗೆದ್ದೇಬಿಟ್ಟೆವು ಎಂದು ಬೀಗಿದ್ದರು ವಿಜ್ಞಾನಿಗಳು. ವಿಶ್ವದ ಆಗುಹೋಗುಗಳನ್ನೆಲ್ಲ ಅರಿತುಕೊಳ್ಳುವುದಕ್ಕೆ **ಗುರುತ್ವ, ಕಾಂತತ್ವ, ಸ್ಥಾಯೀ ವಿದ್ಯುತ್ತು** ಎಂಬ ಮೂರರನ್ನು ಕುರಿತ ನಿಯಮಗಳು ಸಾಕೇ ಸಾಕು ಎನ್ನುವಂತಾಗಿತ್ತು. ಯಾವ ಕಣಗಳು ಯಾವಾಗ ಎಲ್ಲಿ ಎಷ್ಟು ವೇಗದಲ್ಲಿ ಚಲಿಸುತ್ತಿವೆ ಎಂದು ಅರಿತಿದ್ದೇ ಆದರೆ ಎಲ್ಲವೂ ಸುಸಂಬದ್ಧ; ಅಲ್ಲಿ ಪ್ರಕೃತಿಯ ಸ್ವೇಚ್ಛಾಚಾರಕ್ಕೆ ಅವಕಾಶವೇ ಇಲ್ಲ; ರಾಶಿ (mass), ವಿದ್ಯುದಂಶ (charge), ಕಾಂತಧ್ರುವ (magnetic pole) ಇವುಗಳ ನಿರ್ಭಾವುಕ ಸಮೀಕರಣಗಳ ಮೂಲಕ ಎಲ್ಲವೂ ಪೂರ್ವನಿರ್ಧಾರಿತವಾಗಿಯೇ ನಡೆಯುತ್ತದೆ ಎಂದ ಮೇಲೆ ಪರಮಾತ್ಮನಿಗೋ ಪರಬ್ರಹ್ಮಕ್ಕೋ ಕೆಲಸವಾದರೂ ಏನು, ಅದರ ಅಸ್ತಿತ್ವದ ಆವಶ್ಯಕತೆಯಾದರೂ ಎಲ್ಲಿ? ಅಂತಿಮ ಹಂತದ ಇಂತಹ 'ಕ್ಷೇತ್ರ ಸಮೀಕರಣ'ಗಳ ಬಗ್ಗೆ ಕೆಲವರಿಗೆ ಸಂದೇಹ ಉಂಟಾದರೂ, ಅವುಗಳ ಹಿಂದಿದ್ದ ಗಣಿತೀಯ ತರ್ಕಬದ್ಧತೆಗೆ ಹೆದರಿ ಯಾರೂ ಅವನ್ನು ಪ್ರಶ್ನಿಸ ಲಿಲ್ಲ; 'ರಾಶಿ'ಯಂತಹ ಮೂಲಭೂತ ಸಂಗತಿಯ ವೈಜ್ಞಾನಿಕ ನಿರೂಪಣೆಗೂ ಸಹ 'ಪದಾರ್ಥವೊಂದರಲ್ಲಿ ಅಡಗಿರುವ ವಸ್ತುವಿನ ಪರಿಮಾಣಕ್ಕೆ ರಾಶಿಯೆಂದು ಹೆಸರು' ಎನ್ನುವುದಕ್ಕಿಂತ ಹೆಚ್ಚಿನ ವಿವರಣೆ ಬೇಕು ಎನ್ನಿಸಲಿಲ್ಲ.

> **ಅಂತರಂಗದ ಪ್ರಜ್ಞೆಯ ಜಗತ್ತು ಕೂಡ ವೈಜ್ಞಾನಿಕ ಪರಿಶೀಲನೆಗೆ ಒಳಪಡಬೇಕಾದ ಒಂದು ದತ್ತಾಂಶ. ಅಂತಹ ಪರಿಶೀಲನೆ ಭೌತ ವಿಜ್ಞಾನವನ್ನು ಅಸ್ತಿತ್ವದ ಆಧ್ಯಾತ್ಮಿಕ ಆಯಾಮಕ್ಕೆ ಒಯ್ಯುತ್ತದೆ. ಅಲ್ಲದೆ, ಅದನ್ನು ವೇದಾಂತ ಮತ್ತಿತರ ತತ್ತ್ವಚಿಂತನೆಗಳು ರೂಪಿಸಿರುವ ಅಧ್ಯಾತ್ಮಶಾಸ್ತ್ರದ ಹತ್ತಿರ ತರುತ್ತದೆ... ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭೌತವಿಜ್ಞಾನ ಮತ್ತು ಅಧ್ಯಾತ್ಮ ವಿಜ್ಞಾನಗಳ ನಡುವೆ ಬೆಳೆಯುತ್ತಿರುವ ಆರೋಗ್ಯಕರವಾದ ಪರಸ್ಪರ ಸಹಕಾರಕ್ಕೆ ಇದು ಸ್ಪಷ್ಟವಾದ ಸೂಚನೆಯಾಗಿದೆ.**
>
> – ಸ್ವಾಮಿ ರಂಗನಾಥಾನಂದ

ವರ್ಷಗಳು ಕಳೆದಂತೆ ವಿಜ್ಞಾನದ ಈ 'ಆದರ್ಶ ತರ್ಕಬದ್ಧತೆ'ಯ ತಳಹದಿಯಲ್ಲಿ ಬಿರುಕು ಕಾಣಿಸಿಕೊಳ್ಳಲಾರಂಭಿಸಿತು. ಮೇಲೆ ಕಾಣಿಸಿದ ರಾಶಿಯ ನಿರೂಪಣೆಯಲ್ಲಿರುವ 'ಪರಿಮಾಣ'ಕ್ಕೆ (amount) ಏನರ್ಥ? ಅದೇನು ವಸ್ತುವಿನ ಗಾತ್ರವೆ, ವಸ್ತುವಿನಲ್ಲಿ ಅಡಗಿರುವ ಮೂಲಭೂತ ಕಣಗಳನ್ನು ಎಣಿಸಿ ಬಂದ ಮೊತ್ತವೆ? ಏನು ಪರಿಮಾಣವೆಂದರೆ?

'ವಿದ್ಯುದಂಶ'ಕ್ಕೆ ನಿರೂಪಣೆ ಕೊಡುವ ಪ್ರಯತ್ನ ಇನ್ನೂ ದಯನೀಯ. 'ತನ್ನ ಹಾಗೆ ಇರುವ ಇನ್ನಿತರ ವಸ್ತುಗಳ ಮೇಲೆ (ಆಕರ್ಷಣ ಅಥವಾ ವಿಕರ್ಷಣ) ಬಲವನ್ನುಂಟುಮಾಡಬಲ್ಲ, ರಾಶಿರಹಿತ ವಸ್ತು' (a thing with no mass that produces force on all other things like itself). ರಾಶಿ ಇಲ್ಲದ ವಸ್ತು ಹೇಗಿರುತ್ತದೆ? ಹೈಸ್ಕೂಲಿಗೆ ಬಂದಿರುವ ಬುದ್ಧಿಶಾಲಿ ಬಾಲಕನೊಬ್ಬನಿಗೆ ಸಂದೇಹ ಉಳಿಯದಂತೆ 'ವಿದ್ಯುದಂಶ'ದ ಕಲ್ಪನೆಯನ್ನು ಅರ್ಥಮಾಡಿಸಿ, ನೋಡೋಣ!

ಐನ್‌ಸ್ಟೈನ್ ಮಹಾಶಯ 'ವಿದ್ಯುತ್ಕಾಂತತ್ವಕ್ಕೂ ಗುರುತ್ವ ಜಡತ್ವ ಸಂಕೀರ್ಣಕ್ಕೂ ಸಂಬಂಧ ಸ್ಥಾಪಿಸಲು ಸಾಧ್ಯವಾದರೆ ವಿಶ್ವರಹಸ್ಯ ತಿಳಿದಂತೆಯೇ!' ಎಂದು ಉದ್ಘೋಷಿಸಿದ. ಆದರೆ ಅವನಿಗಾಗಲಿ, ಇನ್ನು ಯಾರಿಗೇ ಆಗಲಿ ಈವರೆಗೆ ಅದನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ!